ಸದ್ದು, ದೋಸೆ ತವಾದ ಚುಂಯ್ ಸದ್ದುಗಳ ನಡುವೆ ಮಧ್ಯಾಹ್ನಗಳನ್ನು ಸವಿದ ನನಗೆ ಆಗೀಗ ಸಪ್ಲೇಯರ್‌ಗಳ ಕೃಪೆಯಿಂದ ಬಿಟ್ಟಿ ಚಹಾನೂ ದೊರೆಯುತ್ತಿತ್ತು. ಎಡಗೈ ಲೋಟಾದಿಂದ ಬಲಗೈಯ ಲೋಟಕ್ಕೆ ಚಹಾವನ್ನು ಆಕಾಶದೆತ್ತರಕ್ಕೆ ಎಳೆದು ಎಳೆದು ಆರಿಸುತ್ತಿದ್ದ ಅವರ ವೈಖರಿ ಹೇಗಿತ್ತೆಂದರೆ ಶೂನ್ಯದಲ್ಲೂ ಅವರು ಬಿಡಿಸುತ್ತಿದ್ದ ಚಿತ್ತಾರದ ಹಾಗೆ. ಪಿ.ಸಿ. ಸರ್ಕಾರ್ ಮಾಡುತ್ತಿದ್ದ ಜಾದೂವಿನ ಹಾಗೆ. ಸರ್ಕಾರ್ ಎಳೆದಷ್ಟೂ ಪೇಪರು, ಬಟ್ಟೆ ಹೇಗೆ ಉದ್ದವಾಗುತ್ತ ಹೋಗುವುದೋ ಹಾಗೆ ಇರುವ ಒಂದೇ ಲೋಟ ಕಾಫಿಯನ್ನು ಇವರು ಮೀಟರ್‌ಗಳಷ್ಟು ಉದ್ದಕ್ಕೆ ತರಹೇವಾರಿ ಆಂಗಲ್‌ಗಳಲ್ಲಿ ಒಂದು ಹನಿ ಕೆಳಕ್ಕೆ ಬೀಳದಂತೆ ಹಿಗ್ಗಿಸುತ್ತಿದ್ದರು. ಮುಂದೆ ಜಟಕಾಬಂಡಿ ಓಡಿಸಬೇಕು, ಇಲ್ಲವಾದರೆ ಆಟೊ, ಸಾಧ್ಯವಾದರೆ ಬಸ್ ಡ್ರೈವರ್ ಅಥವ ಕಂಡಕ್ಟರ್ ಆಗಬೇಕೆಂಬ ನನ್ನ ಎಳವೆಯ ಅದ್ಭುತ ಕನಸುಗಳಿಗೆ ಇದೀಗ ಸಪ್ಲೇಯರ್ ಆದರೂ ಅಡ್ಡಿಯಿಲ್ಲ ಎಂಬ ಕನಸೊಂದು ಸೇರಿಕೊಂಡಿತು. ದಿನವೂ ಬೇಕು ಬೇಕೆಂದಾಗ ಇಡ್ಲಿ ದೋಸೆ ಬೋಂಡಗಳನ್ನು ಬೇಕು ಬೇಕೆಂದಷ್ಟು ತಿನ್ನಬಹುದು. ಅಯ್ಯೋ ಯಾರಿಗುಂಟು ಯಾರಿಗಿಲ್ಲ ಈ ಅದೃಷ್ಟ! ಹೊಟ್ಟೆ ತುಂಬಿದ್ದಾಗ ದೋಸೆ ತವದ ಮೇಲೆ ನೀರು ಹುಯ್ದು ಚೊಂಯ್ ಚೊಂಯ್ ಸದ್ದು ಮಾಡಿ ಮಗುಚುವ ಕೈಯಲ್ಲಿ ಒಂದು ಸಲ ಠಣ್ ಎಂದು ಹೊಡೆದರೆ ಅದರ ಗಮ್ಮತ್ತೇ ಬೇರೆ. ಅದು ಪೊಲೀಸನ ಕೈಯಲ್ಲಿನ ಲಾಠಿಯ ಹಾಗೆ, ಕೃಷ್ಣದೇವರಾಯನ ಕತ್ತಿಯ ಹಾಗೆ. ಜಟಕಾಸಾಬಿಯು ಕುದುರೆ ಓಡಿಸುವಾಗ ಮಧ್ಯ ಮಧ್ಯೆ ಗಾಲಿಗೆ ತನ್ನ ಬಾರುಕೋಲು ತಗುಲಿಸಿ ಟಕ ಟಕ ಟಕ ಎಂದು ಚಿಮ್ಮಿಸುತ್ತಿದ್ದ ಶಬ್ದ ತರಂಗದ ಹಾಗೆ.

ಈ ಯಾವ ಆಸೆಗಳೂ ಈಡೇರದೆ ಮೂವತ್ತು ವರುಷಗಳ ನಂತರ ಕೈಯಲ್ಲೊಂದು ಪ್ಲೇಟ್ ಹಿಡಿದು ಚೆನ್ನೈನ 'ಲೀ ಮೆರಿಡಿಯನ್' ಎಂಬ ಸೆವೆನ್ ಸ್ಟಾರ್ ಹೋಟೆಲಿನಲ್ಲಿ ಬೆಳಗಿನ 'ಕಾಂಪ್ಲಿಮೆಂಟರಿ' ಏನು ಬೇಕಾದರೂ ಎಷ್ಟು ಬೇಕಾದರೂ ತಿನ್ನಬಹುದಾದ ತಿಂಡಿಗಳ ನಡುವೆ ಕಂಗಾಲಾಗಿ ಸುತ್ತಾಡುತ್ತಿದ್ದ ನನ್ನ ತಲೆಯಲ್ಲಿ ಒಂದು ಕ್ಷಣ ರಘು ಹೋಟೆಲಿನ ಸಿಂಗಲ್ ಖಾಲಿ ಪ್ರತ್ಯಕ್ಷವಾಗಿ ಹೆಮ್ಮೆಯಿಂದ ನನ್ನ ಮುಖವನ್ನೇ ದಿಟ್ಟಿಸಿ ಬೆನ್ನು ತಟ್ಟಿ ನಕ್ಕು 'ಕಂಗ್ರಾಚುಲೇಶನ್ಸ್... ಯಾವ ಸೆಂಟಿಮೆಂಟೂ ಬೇಡ. ಕಾಲ ಬಂದಿದೆ. ಚೆನ್ನಾಗಿ ಗದುಮು' ಎಂದು ಹೇಳಿ ಮರೆಯಾಯಿತು. 'ಮಾಯಾಬಜಾರ್' ಸಿನಿಮಾದಲ್ಲಿ ಎಸ್.ವಿ. ರಂಗರಾವ್ ಗದೆ ಹಿಡಿದು ಒಹೊರೆ ಪಾಯಸ, ಪುಳಿಯೋಗರೆ, ಹಪ್ಪಳ ಜಿಲೇಬಿ, ಲಾಡು, ಉಪ್ಪಿಟ್ಟು, ತಂಬೂಳಿಗಳ ನಡುವೆ 'ವಿವಾಹ ಭೋಜನವಿದು...' ಎಂದು ಸುತ್ತುತ್ತಿದ್ದ ಹಾಗೆ ನಾನೀಗ ತರಹೇವಾರಿ ಉಪ್ಪಿಟ್ಟುಗಳು, ಹತ್ತಾರು ಥರದ ದೋಸೆ, ಪೂರಿ, ಇಡ್ಲಿ, ರೋಟಿ, ಚಿರೋಟಿ, ಪಾಯಸ, ಬ್ರೆಡ್, ಬಟರ್ ಜಾಮು, ಬೋಂಡ, ಪಕೋಡ, ಡ್ರೈ ಫ್ರೂಟ್ಸ್, ಹಣ್ಣು, ಕೇಕು, ಹತ್ತಾರು ವಿನ್ಯಾಸದ ಮ್ಯಾಗಿಗಳು, ಚೈನಿಸ್ ತಿಂಡಿಗಳು, ರಸಗುಲ್ಲ, ಪರೋಟ ನಮುನಮೂನೆಯ ಚಟ್ನಿಗಳ ನಡುವೆ ಯಾವುದನ್ನು ಆಯ್ಕೆ ಮಾಡಲಿ ಎಂದು ಅವುಗಳನ್ನು ಪೇರಿಸಿಟ್ಟ ಸಾಲುಗಳ ಹಿಂದೆ ಮುಂದೆ ಓಡಾಡುತ್ತಿದ್ದೇನೆ. ಬೆವರು ಬಂದರೂ ಬೆವರುವಂತಿಲ್ಲ. ಅದು ಎ.ಸಿ. ರೂಮು. ಮ್ಯಾಗಿ ತಗೊಂಡು ತಿನ್ನಲು ಬರದೆ ಜಾರಿ ಕೆಳಗೆ ಬಿದ್ದರೆ? ಇದು ಮರ್ಯಾದೆ ಪ್ರಶ್ನೆ. ಹಾಗಾಗಿ ಅದೂ ಬೇಡ. 'ಚೈನಿಸ್' ಮುಟ್ಟಲು ಭಯ. ಬೇಕೆನಿಸಿದ್ದನ್ನೆಲ್ಲ ಬಡಿಸಿಕೊಂಡು ಆಮೇಲೆ ತಿನ್ನಲಾಗದೆ ಚೆಲ್ಲುವಂತಾದರೆ? ಕೂಡದು. ಇದೂ ಮರ್ಯಾದೆ ಪ್ರಶ್ನೆ. ನಾನು ಹೀಗೆ ಎಲ್ಲವನ್ನೂ ತಿನ್ನುವಂತೆ ನೋಡುತ್ತಿರುವುದನ್ನು ಯಾರಾದರೂ ನೋಡಿ ನಕ್ಕರೆ... ಇಲ್ಲ ಅದಕ್ಕೆ ಅವಕಾಶ ಕೊಡಬಾರದು. ನಾನು ತುಂಬಾ ಪ್ರೊಫೆಷನಲ್ ಅಂತ ತೊರಿಸಿಕೊಳ್ಳಬೇಕು.' ಮಗೂ ಮಯೂರವರ್ಮ, ಈ